2031(3203) ಶ್ರೀ ಅಂಗಾರ ಎಸ್. (ಸುಳ್ಯ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಗುತ್ತಿಗಾರು ಮತ್ತು ಸಂಪಾಜೆಗಳಲ್ಲಿ 33 ಕೆ.ವಿ. ಸಬ್ ಸ್ಟೇಷನ್ ಮಂಜೂರಾಗಿದ್ದು ಯಾವಾಗ;

ಆ) ಕಾಮಗಾರಿ ಪ್ರಾರಂಭಗೊಂಡಿದೆಯೇ;

ಇ) ಪ್ರಾರಂಭವಾಗಿದ್ದಲ್ಲಿ, ಕಾಮಗಾರಿ ಯಾವಾಗ ಪೂರ್ಣಗೊಳ್ಳುವುದು;

ಈ) ಈ ಕಾಮಗಾರಿಯ ಅಂದಾಜು ವೆಚ್ಚ ಎಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗುತ್ತಿಗಾರು ಎಂಬಲ್ಲಿ 33 ಕೆ.ವಿ. ವಿದ್ಯುತ್ ಉಪ ಕೇಂದ್ರ ಮಂಜೂರಾತಿಯಾಗಿರುವುದಿಲ್ಲ. ಸಂಪಾಜೆಯಲ್ಲಿ 33 ಕೆ.ವಿ. ಸಬ್–ಸ್ಟೇಷನ್ ನಿರ್ಮಾಣವು ಸುಳ್ಯದಲ್ಲಿ ಹಾಲಿಯಿರುವ 33 ಕೆವಿಯ ಸಬ್–ಸ್ಟೇಷನನ್ನು 110 ಕೆ.ವಿ.ಗೆ ಉನ್ನತೀಕರಣ ಮಾಡುವ ಯೋಜನೆಯಲ್ಲಿ ಸೇರಿಸಲ್ಪಟ್ಟಿದೆ. ಇದು 1999 ರಲ್ಲಿ ಮಂಜೂರಾಗಿದ್ದು, ಜೂನ್–2002 ರಲ್ಲಿ ಮೆಸ್ಕಾಂ ಕಾರ್ಯಾರಂಭ ಮಾಡಿದ ನಂತರ, 33 ಕೆ.ವಿ. ಸ್ಟೇಷನ್ ಕೆಲಸಗಳನ್ನು ಮೆಸ್ಕಾ ವತಿಯಿಂದಲೂ, 110 ಕೆ.ವಿ. ಸ್ಟೇಷನ್ ಕೆಲಸಗಳನ್ನು ಕ.ವಿ.ಪ್ರ.ನಿ.ನಿ. ವತಿಯಿಂದಲೂ ಕೈಗೊಳ್ಳಬೇಕಾಗಿರುತ್ತದೆ.

ಆ) ಸಂಪಾಜೆ ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿ ಪ್ರಾರಂಭಗೊಂಡಿರುವುದಿಲ್ಲ.

ಇ) ಸಂಪಾಜೆಯಲ್ಲಿ ಇನ್ನೂ ಕಾಮಗಾರಿ ಪ್ರಾರಂಭವಾಗಿಲ್ಲದಿರುವುದರಿಂದ, ಈ ವಿಷಯ ಅನ್ವಯಿಸುವುದಿಲ್ಲ.

ಈ) ಸಂಪಾಜೆಯಲ್ಲಿ ನಿರ್ಮಿಸಲು ಉದ್ದೇಶಿಸಿರುವ 33 ಕೆ.ವಿ. ಸ್ಟೇಷನ್‌ನ ಅಂದಾಜು ವೆಚ್ಚ 1999 ರಲ್ಲಿ ತಯಾರಿಸಿದ್ದ ಯೋಜನೆ ರೀತ್ಯ 229.10 ಲಕ್ಷ ರೂ.ಗಳು.

2032(3078) ಶ್ರೀ ಅನಿಲ್ ಹೆಚ್. ಲಾಡ್ (ಕೂಡ್ಲಿಗಿ): ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೂವಿನ ಹಡಗಲಿ ತಾಲ್ಲೂಕಿನ ಮಡಲಗಟ್ಟಿ ಗ್ರಾಮದಲ್ಲಿ ರೂ.50.00 ಲಕ್ಷ ವೆಚ್ಚದಲ್ಲಿ ಪ್ರವಾಸೋದ್ಯಮ ಕೇಂದ್ರ ಅಭಿವೃದ್ಧಿಯಾಗಿದ್ದರೂ ಕೂಡ ಇಲ್ಲಿಯವರೆಗೆ ಇಲಾಖೆ ವಶಕ್ಕೆ ನೀಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಏಕೆ ತಡವಾಗಿದೆ;

ಇ) ಯಾವಾಗ ಇಲಾಖೆಯ ವಶಕ್ಕೆ ತೆಗೆದುಕೊಳ್ಳಲಾಗುತ್ತದೆ?

ಶ್ರೀ ಡಿ.ಟಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು):

ಅ) ಈ ಸೌಲಭ್ಯವನ್ನು ಇಲಾಖೆ ವಶಕ್ಕೆ ಪಡೆದು ಖಾಸಗೀಕರಣಗೊಳಿಸಲು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ಹಸ್ತಾಂತರಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

2033(3079) ಶ್ರೀ ಅನಿಲ್ ಹೆಚ್. ಲಾಡ್ (ಕೂಡ್ಲಿಗಿ): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೂಡ್ಲಿಗಿ ಮತಕ್ಷೇತ್ರದಲ್ಲಿ ಅರಣ್ಯ ಒತ್ತುವರಿ ಭೂಮಿ ಎಷ್ಟು ಹಾಗೂ ಇದನ್ನು ಭೂರಹಿತ ಕಡುಬಡ ರೈತರಿಗೆ ಎಷ್ಟು ಭೂಮಿ ಹಂಚಲಾಗಿದೆಯೇ;

ಆ) ಒತ್ತುವರಿ ಮಾಡಿರುವ ರೈತರ ಭೂಮಿಯನ್ನು ಸಕ್ರಮಗೊಳಿಸಲಾಗಿದೆಯೆ;

ಇ) ಹಾಗಿದ್ದರೆ ಎಷ್ಟು ಸಕ್ರಮಗೊಳಿಸಲಾಗಿದೆ (ವಿವರ ಒದಗಿಸುವುದು);

ಈ) ಸಕ್ರಮ ಮಾಡಿಲ್ಲದೇ ಇದ್ದರೆ ಯಾವಾಗ ಮಾಡಲಾಗುವುದು;

ಉ) ಈ ಬಗ್ಗೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಕೂಡ್ಲಿಗಿ ಮತ ಕ್ಷೇತ್ರದಲ್ಲಿ ಒತ್ತುವರಿಯಾಗುತ್ತಿರುವ ಅರಣ್ಯ ಭೂಮಿಯ ವಿಸ್ತೀರ್ಣ 808.92 ಹೆ. ದಿನಾಂಕ: 27.4.1978ರ ಪೂರ್ವದಲ್ಲಾದ ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರೆತಿರುವ ಅರ್ಹ ಒತ್ತುವರಿದಾರರಿಗೆ ಭೂಮಿ ಸಕ್ರಮಗೊಳಿಸಬಹುದಾಗಿರುತ್ತದೆ. ಈ ಪೈಕಿ ಹೊಸಪೇಟೆ ತಾಲ್ಲೂಕಿನಲ್ಲಿ 43.52 ಹೆ. ಪ್ರದೇಶವು ಸಕ್ರಮಾತಿಗೆ ಕೇಂದ್ರದ ಅನುಮೋದನೆ ದೊರೆತಿದ್ದು ಅದರಂತೆ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿದೆ.

ಆ) ಇಲ್ಲ. ಆದಾಗ್ಯೂ ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡ ಅರ್ಹ ಪ್ರಕರಣಗಳನ್ನು ಸಕ್ರಮಗೊಳಿಸಲು ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಇ) ಉದ್ಭವಿಸುವುದಿಲ್ಲ.

ಈ) ಜಿಲ್ಲಾಧಿಕಾರಿಗಳಿಂದ ಅರ್ಹ ಪ್ರಕರಣ ಪಟ್ಟ ಸ್ವೀಕೃತವಾದ ನಂತರ ಕ್ರಮ ಕೈಗೊಳ್ಳಲಾಗುವುದು.

ಉ) ಅರ್ಹ ಪ್ರಕರಣಗಳಲ್ಲಿ ಸಕ್ರಮಾತಿ ಕಾರ್ಯವನ್ನು ಜಿಲ್ಲಾಧಿಕಾರಿಗಳ ಸಮನ್ವಯದೊಂದಿಗೆ ಕೈಗೊಂಡು ಪ್ರಸ್ತಾವನೆ ಸಲ್ಲಿಸಲು ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಗಿದೆ.

2036(3185) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2000–01, 2001–02, 2002–03, 2003–04 ಹಾಗೂ 31.12.2004 ರವರೆಗೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬರಗಾಲ ಪರಿಹಾರಕ್ಕಾಗಿ ಬಂದ ಹಣ ಎಷ್ಟು ಹಾಗೂ ಧಾನ್ಯವೆಷ್ಟು (ವರ್ಷವಾರು ವಿವರ ನೀಡುವುದು);